# ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
# ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು

ಜೆ.ಎಲ್.ಬಿ. ರಸ್ತೆ, ಅಶೋಕ ವೃತ್ತದ ಹತ್ತಿರ
ಲಕ್ಷ್ಮೀಪುರಂ, ಮೈಸೂರು-570 004.
ದೂರವಾಣಿ: 0821-2332703,
Email :musicuniversitymys@gmail.com

J.L.B. Road, Near Ashoka Circle,
Lakshmipuram, Mysuru – 570 004.
Ph.Office: 0821-2402114,
Website: https://www.musicuniversity.ac.in


**ದಿನಾಂಕ: 15-05-2025**

## ಕಛೇರಿ ಆದೇಶ

**ವಿಷಯ:- ವಿಶ್ವವಿದ್ಯಾಲಯದೊಡನೆ ಒಡಂಬಡಿಕೆ ಮಾಡಿಕೊಳ್ಳುವ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಿಗೆ 2025-26 ನೇ ಶೈಕ್ಷಣಿಕ ಸಾಲಿಗೆ ನೊಂದಣಿ ಶುಲ್ಕಗಳನ್ನು ನಿಗದಿ ಪಡಿಸುವ ಬಗ್ಗೆ.**

**ಉಲ್ಲೇಖ:-1 ದಿನಾಂಕ: 15-04-2025 ರಂದು ನಡೆದ 47 ನೇ ಸಿಂಡಿಕೇಟ್ ಸಭೆಯ ಅನುಮೋದನೆ**

**2. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ14-05-2025.**

**ಆದೇಶ ಸಂಖ್ಯೆ: ಕೆ.ಎಸ್.ಜಿ.ಹೆಚ್ ಸಂ.ಪ್ರಕವಿ/ಶುಲ್ಕ ಪರಿಷ್ಕರಣೆ/ 058 /2025-26, ದಿನಾಂಕ: 16-05-2025**

ದಿನಾಂಕ: 15-04-2025. ರಂದು ನಡೆದ ಪ್ರಶಾಸನದ ಸಭೆಯ ನಡಾವಳಿಯಂತೆ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದುಕೊಳ್ಳುವ ಶಿಕ್ಷಣ ಸಂಸ್ಥೆಗಳು ನಡೆಸುವ ವಿವಿಧ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ನೊಂದಣಿ ಶುಲ್ಕವನ್ನು ಹೆಚ್ಚಿಸಿ ಈ ಕೆಳಕಂಡಂತೆ ನಿಗದಿಪಡಿಸಿ 2025-26 ನೇ ಸಾಲಿನಿಂದ ಜಾರಿಗೆ ಬರುವಂತೆ ಆದೇಶಿಸಲಾಗಿದೆ.

| ಕ್ರ ಸಂ | ವಿವರ | 2025-26 ನೇ ಸಾಲಿನ ಶುಲ್ಕದ ವಿವರ |
|---|---|---|
| 1 | ಅರ್ಜಿ ಶುಲ್ಕ | 10,000/- |
| 2 | ಸರ್ಟಿಫಿಕೇಟ್ ಕೋರ್ಸ್‌ಗಳು | 21,000/-/ (ಮೂರು ವರ್ಷಗಳಿಗೆ) |
| 3 | ಡಿಪ್ಲೊಮಾ / ಪಿ ಜಿ ಡಿಪ್ಲೊಮಾ ಕೋರ್ಸ್‌ಗಳು | 35,000/- (ಮೂರು ವರ್ಷಗಳಿಗೆ) |
| 4 | ಪದವಿ ಕೋರ್ಸ್‌ಗಳು | 68,750/- (ಮೂರು ವರ್ಷಗಳಿಗೆ) |
| 5 | ಸ್ನಾತಕೋತ್ತರ ಕೋರ್ಸ್ ಗಳಿಗೆ | 1,05,000/- (ಮೂರು ವರ್ಷಗಳಿಗೆ) |
| 6 | ಪಿ.ಹೆಚ್.ಡಿ ಕೋರ್ಸ್ ನಡೆಸುವ ಸಂಶೋಧನಾ ಕೇಂದ್ರಗಳಿಗೆ. | 1,37,500/- (ಮೂರು ವರ್ಷಗಳಿಗೆ) |

ಮಾನ್ಯತೆ ನೀಡುವ ಸಲುವಾಗಿ ಸಂಸ್ಥೆಗಳಲ್ಲಿನ ಮೂಲ ಸೌಕರ್ಯ ಮತ್ತು ಬೋಧಕ ವೃಂದದ ನೇಮಕಾತಿಗಳ ಬಗ್ಗೆ ಪರಿಶೀಲನೆ ನಡೆಸಲು ಸಂಸ್ಥೆಗೆ ಭೇಟಿ ನೀಡುವ ತಜ್ಞರ ಸಮಿತಿಯ ಸದಸ್ಯರುಗಳಿಗೆ ವಾಹನ ಭತ್ಯೆ ಮತ್ತು ಇತರೆ ಭತ್ಯೆಗಳನ್ನು ಮಾನ್ಯತೆ ಪಡೆಯಬಯಸುವ ಸಂಸ್ಥೆಗಳು ತಜ್ಞರುಗಳು ಭೇಟಿ ನೀಡಿದ ಸಂದರ್ಭದಲ್ಲೇ ನಿಯಮಾನುಸಾರ ಪಾವತಿಸಬೇಕು.

ಹಾಗೂ ಮಾನ್ಯತೆ ಪಡೆದ ನಂತರ ಸಂಸ್ಥೆಗಳು ನಡೆಸಬೇಕಾಗುವ "Managing Council" ಸಭೆಯ ಸದಸ್ಯರುಗಳ ವಾಹನ ಭತ್ಯೆ ಮತ್ತು ಇತರೆ ಭತ್ಯೆಗಳನ್ನು ಸಹಾ ಸಭಾ ದಿನಗಳಿಂದಲೇ ಸಂಬಂಧಿಸಿದ ಸಂಸ್ಥೆಗಳು ನಿಯಮಾನುಸಾರ ಪಾವತಿಸಬೇಕು.

ಮುಂದುವರೆದು ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳು "Managing Council" ಸಭೆಯಲ್ಲಿ ಚರ್ಚಿಸಿ ವಿದ್ಯಾರ್ಥಿಗಳಿಗೆ ನಿಗದಿಪಡಿಸುವ ಪ್ರವೇಶ ಶುಲ್ಕ ಮತ್ತು ಇತರೆ ಶುಲ್ಕಗಳ ಶೇಕಡ 25% ರಷ್ಟು ಮೊತ್ತವನ್ನು ವಿಶ್ವವಿದ್ಯಾಲಯದ ಖಾತೆಗೆ ವರ್ಗಾಯಿಸುವುದು. ಹಾಗೂ ವಿಶ್ವವಿದ್ಯಾಲಯ ನಿಗದಿ ಪಡಿಸುವ ಪರೀಕ್ಷಾ ಶುಲ್ಕಗಳ ಮೊತ್ತವನ್ನು ವಿಶ್ವವಿದ್ಯಾಲಯದ ಖಾತೆಗೆ ಜಮಾ ಮಾಡಲು ಸಂಬಂಧಿಸಿದ ಸಂಸ್ಥೆಗಳು ಕ್ರಮ ತೆಗೆದುಕೊಳ್ಳಬೇಕು.

ಆದೇಶದ ಮೇರೆಗೆ

ಕುಲಸಚಿವರು

ಕುಲಸಚಿವರು
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು - 570 004

ಪ್ರತಿಗಳು:-

1. ಮಾನ್ಯ ಕುಲಪತಿಯವರ,ಕುಲಸಚಿವರ ಆಪ್ತ ಶಾಖೆ, ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು.
2. ಕುಲಸಚಿವರು(ಮೌಲ್ಯಮಮಾಪನ) ಹಾಗೂ ಹಣಕಾಸು ಅಧಿಕಾರಿಗಳ ಆಪ್ತ ಶಾಖೆ, ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು.
3. ಅಪರ ನಿರ್ದೇಶಕರು, ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಪ್ರಾಂತೀಯ ಕಛೇರಿ, ಮೈಸೂರು ವಿಭಾಗ, ಮೈಸೂರು
4. ಕಛೇರಿ ಪ್ರತಿ.